**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿ.ಸಂಖ್ಯೆಃ 549/2015**

**ಪಿರ್ಯಾದಿ** ಃ ಬದನವಾಳು ಪೊಲೀಸರು

**ವಿರುದ್ಧ**

**ಆರೋಪಿತರು ಃ**

1. ರಂಗ ನಾಯ್ಕ, ಬಿನ್ ಲೇ. ಕುಳ್ಳ ನಾಯ್ಕ, 60 ವರ್ಷ
2. ರಂಗಸ್ವಾಮಿ ಆರ್., ಬಿನ್ ರಂಗ ನಾಯ್ಕ, 45 ವರ್ಷ
   1 ಮತ್ತು 2 ನೇ ಆರೋಪಿತರ ವಾಸಃ ವಿದ್ಯಾ ನಗರ, ಟೀ. ನರಸೀಪುರ ತಾ.
3. ನಂಜುಂಡನಾಯ್ಕ, ಬಿನ್ ಸಿದ್ಧನಾಯ್ಕ, 50 ವರ್ಷ
   ವಾಸಃ ಕೆಂಪಯ್ಯನಹುಂಡಿ ಗ್ರಾಮ, ಟೀ. ನರಸೀಪುರ ತಾ.
4. ಕರಿ ನಾಯ್ಕ, ಬಿನ್ ಲೇ. ಕರಿ ನಾಯ್ಕ, 30 ವರ್ಷ
   ವಾಸಃ ತುಂನೇರಳೆ ಗ್ರಾಮ, ನಂಜನಗೂಡು ತಾ.

**ದೋಷಾರೋಪಣೆ**

*ಶ್ರೀ ಕಿಶೋರ್ ಕುಮಾರ್ ಎಂ., 1 ನೇ ಹೆಚ್ಚುವರಿ* ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಬಿ.ಎ. ಎಲ್‌ಎಲ್.ಬಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:-

ದಿನಾಂಕ 12.04.2014 ರಂದು ಬೆಳಗ್ಗೆ 8.00 ಗಂಟೆ ಸಮಯದಲ್ಲಿ ಬದನವಾಳು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ತುಂನೇರಳೆ ಗ್ರಾಮದ ಸರ್ವೆ ನಂ.332/2 ರಲ್ಲಿ ಚಾಸಾ-1 ರವರು ಭತ್ತದ ನಾಟಿ ಮಾಡಿರುವ ಜಮೀನಿಗೆ ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶ ಹೊಂದಿ, ಅಕ್ರಮ ಪ್ರವೇಶ ಮಾಡಿದ ಕಾರಣ ಭಾರತ ದಂಡ ಸಂಹಿತೆಯ ಕಲಂ 447 ಸಹವಾಚಕ ಕಲಂ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಎರಡನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶ ಹೊಂದಿ, ಚಾಸಾ-1 ರವರಿಗೆ ಬೋಳಿ ಮಗನೇ, ಸೂಳೆ ಮಗನೇ, ಈ ಗದ್ದೆ ನಮಗೆ ಸೇರಬೇಕು, ನೀವು ಹೇಗೆ ನಾಟಿ ಮಾಡಿಸಿದ್ದೀರಿ ಎಂದು ಅವಾಚ್ಯ ಶಬ್ದಗಳಿಂದ ಬೈದು, ಆ ಮೂಲಕ ಅವರಿಗೆ ಉದ್ರೇಕವನ್ನುಂಟು ಮಾಡಿದರೆ ಅಂತಹ ಉದ್ರೇಕದಿಂದ ಶಾಂತಿ ಭಂಗ ಮಾಡಲಿ ಅಥವಾ ಇತರೆ ಯಾವುದೇ ಅಪರಾಧ ಮಾಡಲಿ ಎನ್ನುವ ಉದ್ದೇಶದಿಂದ ಅವರನ್ನು ಅವಮಾನಿಸಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ 504 ಸಹವಾಚಕ ಕಲಂ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೂರನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶ ಹೊಂದಿ, ಎತ್ತುಗಳಿಗೆ ಹಲುಭೆಯನ್ನು ಕಟ್ಟಿ ನಾಟಿ ಮಾಡಿದ್ದ ಭತ್ತದ ಪೈರನ್ನು ನಾಶ ಮಾಡಿ ಸುಮಾರು ರೂ.5,000/- ಗಳ ನಷ್ಟವನ್ನು ಚಾಸಾ-1 ರವರಿಗೆ ಉಂಟುಮಾಡಿದ ಕಾರಣ, ಭಾರತ ದಂಡ ಸಂಹಿತೆ ಕಲಂ 427 ಸಹವಾಚಕ ಕಲಂ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಕೊನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶ ಹೊಂದಿ, ಚಾಸಾ-1 ರವರಿಗೆ ಕೊಲೆ ಬೆದರಿಕೆ ಹಾಕಿದ ಕಾರಣ, ಭಾರತ ದಂಡ ಸಂಹಿತೆಯ ಕಲಂ 506 ಸಹವಾಚಕ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

(ಮೇಲ್ಕಂಡ ಆರೋಪವನ್ನು ಆರೋಪಿತರಿಗೆ ಓದಿ ಹೇಳಿ ಕೇಳಲಾಯಿತು. ಆರೋಪಿತರು ಕೊಟ್ಟ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನು ಒಳಗೊಂಡಿದೆ ಎಂದು ದಿನಾಂಕ 02.01.2023 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸಿರುತ್ತೇನೆ.)

**1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.**
**ನಂಜನಗೂಡು**

**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ,**
**ನಂಜನಗೂಡು**

**ಸಿ.ಸಿ.ಸಂಖ್ಯೆಃ 549/2015**

**ಪಿರ್ಯಾದಿ ಃ** ಬದನವಾಳು ಪೊಲೀಸರು

**ವಿರುದ್ಧ**

**ಆರೋಪಿತರು ಃ**

1. ರಂಗ ನಾಯ್ಕ, ಬಿನ್ ಲೇ. ಕುಳ್ಳ ನಾಯ್ಕ, 60 ವರ್ಷ
2. ರಂಗಸ್ವಾಮಿ ಆರ್., ಬಿನ್ ರಂಗ ನಾಯ್ಕ, 45 ವರ್ಷ
   1 ಮತ್ತು 2 ನೇ ಆರೋಪಿತರ ವಾಸಃ ವಿದ್ಯಾ ನಗರ, ಟೀ. ನರಸೀಪುರ ತಾ.
3. ನಂಜುಂಡನಾಯ್ಕ, ಬಿನ್ ಸಿದ್ಧನಾಯ್ಕ, 50 ವರ್ಷ
   ವಾಸಃ ಕೆಂಪಯ್ಯನಹುಂಡಿ ಗ್ರಾಮ, ಟೀ. ನರಸೀಪುರ ತಾ.
4. ಕರಿ ನಾಯ್ಕ, ಬಿನ್ ಲೇ. ಕರಿ ನಾಯ್ಕ, 30 ವರ್ಷ
   ವಾಸಃ ತುಂನೇರಳೆ ಗ್ರಾಮ, ನಂಜನಗೂಡು ತಾ.

**ಃ ಆಪಾದನೆ ಃ**

ಪ್ರಶ್ನೆ1 ಃ ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ ?
ಉತ್ತರ ಃ

ಪ್ರಶ್ನೆ2 ಃ ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಯಾಗಬೇಕೋ?
ಉತ್ತರ ಃ

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿತನ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸಲಾಗಿದೆ.

ದಿನಾಂಕಃ

1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ನಂಜನಗೂಡು